

# ಆಲಿಯಾಗೆ ಮದುವೆಯಂತೆ!




ಇನ್ನೂ ಚಿಕ್ಕ ಹುಡುಗಿಯಂತೆ ಕಾಣಿಸಿಕೊಳ್ಳುತ್ತಿದ್ದಾಗಲೇ ಬಾಲಿವುಡ್ ನಲ್ಲಿ ಸುದ್ದಿ ಮಾಡಿದ ಹುಡುಗಿ ಅಲಿಯಾ ಭಟ್. ಸದ್ಯಕ್ಕೆ ಬಾಲಿವುಡ್ ನ ಅತ್ಯಂತ ಭರವಸೆಯ ನಟಿಯೂ ಹೌದು. 'ಬದ್ರಿನಾಥ್ ಕಿ ದುಲ್ಹನಿಯಾ' ಚಿತ್ರ ಬಾಕ್ಸಾಫೀಸ್ ನಲ್ಲಿ ದಾಖಲೆ ನಿರ್ಮಿಸಿ ನೂರು ಕೋಟಿ ರೂಪಾಯಿಗಳ ದಾಖಲೆ ನಿರ್ಮಿಸಿದ ಬಳಿಕವಂತೂ ಅಲಿಯಾಳ ಮಾರ್ಕೆಟ್ ಇನ್ನಷ್ಟು ಮೇಲಕ್ಕೇರಿದೆ.

ಹಿಂದೆಲ್ಲ ಅಲಿಯಾಳ ಮುಗ್ಧ ಮತ್ತು ಬಾಲಿಶತನದ ಮಾತುಗಳು ಪತ್ರಕರ್ತರಿಗೆ ತಮಾಷೆಯ ಸಂಗತಿಗಳಾಗಿದ್ದವು. ಅಲಿಯಾ ಭಟ್ ಜೋಕ್ ಗಳೂ ಹುಟ್ಟಿಕೊಂಡಿದ್ದವು. ಆದರೆ ಈಗ ಪತ್ರಕರ್ತರೂ ಆಕೆಯನ್ನು ಪ್ರೌಢ ನಟಿಯೆಂದೇ ಗುರುತಿಸುತ್ತಾರೆ. 24 ರ ಹರೆಯದಲ್ಲೂ ಪ್ರೌಢವಾಗದಿದ್ದರೆ ಹೇಗೆ?

ಸದ್ಯಕ್ಕೆ ಪತ್ರಕರ್ತರು ಅಲಿಯಾ ಸಿಕ್ಕಿದಾಗಲೆಲ್ಲ ಕೇಳುವ ಪ್ರಶ್ನೆ 'ಮದುವೆ ಯಾವಾಗ?' ಎನ್ನುವುದು. ಅದಕ್ಕೂ ಕಾರಣವಿದೆ. ಅಲಿಯಾ ಭಟ್ ಮತ್ತು ಸಿದ್ದಾರ್ಥ್ ಮಲ್ಹೋತ್ರಾ ನಡುವಣ ಸಂಬಂಧ ಇನ್ನಷ್ಟು ಗಟ್ಟಿಯಾಗಿರುವುದು ಇಬ್ಬರ ಮದುವೆ ಶೀಘ್ರ ನಡೆಯಲಿದೆ ಎನ್ನುವ ಗಾಳಿಸುದ್ದಿ ಹರಡಲು ಕಾರಣ. ಹಾಗೆ ನೋಡಿದರೆ ಇವರ ಸ್ನೇಹ ಇಂದು ನಿನ್ನೆಯದಲ್ಲ. ಬಹುಶಃ ಕಳೆದ ಆರೇಳು ವರ್ಷಗಳಿಂದಲೂ ಇವರಿಬ್ಬರ ಬಗ್ಗೆ ಹಬ್ಬಿರುವ ಗಾಳಿಸುದ್ದಿಗಳಿಗೆ ಲೆಕ್ಕವಿಲ್ಲ. ಹೋದಲ್ಲಿ ಬಂದಲ್ಲಿ ಒಬ್ಬರಿಗೊಬ್ಬರು ಅಂಟಿಕೊಂಡಂತೇ ಓಡಾಡುವ ಈ ಜೋಡಿಯ ಬಗ್ಗೆ ಪತ್ರಕರ್ತರಿಗೂ ಬರೆದು ಬೋರಾಗಿದ್ದು ಸುಳ್ಳಲ್ಲ.

ಇಬ್ಬರ ನಡುವೆ ಇತ್ತೀಚೆಗೆ ವೈಮನಸ್ಸು ಉಂಟಾಗಿದೆ ಎನ್ನುವ ಸುದ್ದಿಯೂ ಹಬ್ಬಿತ್ತು. ಅದಕ್ಕೆ ಕಾರಣ ಜಾಕ್ವೆಲಿನ್. ಸಿದ್ದಾರ್ಥ ಮತ್ತು ಜಾಕ್ವೆಲಿನ್ ಜತೆಯಾಗಿ ನಟಿಸಿದ ಸಿನಿಮಾವೊಂದು 'ಆಫ್ ಸ್ಕ್ರೀನ್'ನಲ್ಲಿ ಸುದ್ದಿ ಮಾಡಿದ್ದೇ ಹೆಚ್ಚು. ಚಿತ್ರದ ಶೂಟಿಂಗ್ ಎಲ್ಲ ಮುಗಿದ ಬಳಿಕವೂ ಸಿದ್ದಾರ್ಥ್ ಅಲ್ಲಿ ಇಲ್ಲಿ ಜಾಕ್ವೆಲಿನ್ ಜತೆಗೆ ಓಡಾಡುವುದು ನೋಡಿ ಅಲಿಯಾ ಕಣ್ಣು ಕೆಂಪಗಾದದ್ದು ಸುಳ್ಳಲ್ಲ. ಈ ಸಿಟ್ಟು ಎಷ್ಟು ಜೋರಾಯಿತೆಂದರೆ ಸಿದ್ದಾರ್ಥ್ ಜತೆ ಅಲಿಯಾ ಹಾಕಿಕೊಂಡಿದ್ದ ಯೂರೋಪ್ ಟೂರ್ ಕೂಡಾ ರದ್ದಾಯಿತಂತೆ.

ಆದರೆ ಇತ್ತೀಚೆಗೆ ಮತ್ತೆ ಈ ಜೋಡಿಯ ನಂಟು ಇನ್ನಷ್ಟು ಗಟ್ಟಿಯಾಗಿದೆ. ಕರಣ್ ಜೋಹರ್ ಪಾರ್ಟಿಗೆ ಇಬ್ಬರೂ ಒಟ್ಟಿಗೇ ಹೋಗಿ ಬಂದರು. ಮೊನ್ನೆ ಶಾರೂಕ್ ಖಾನ್ ತನ್ನ 52ನೆ ಹುಟ್ಟುಹಬ್ಬಕ್ಕೆ ಅಲಿಭಾಗ್ ನಲ್ಲಿ ನೀಡಿದ ಪಾರ್ಟಿಯಲ್ಲಿ ಇಬ್ಬರೂ ಛಾಯಾಗ್ರಾಹಕರಿಗೆ ಮಸ್ತ್ ಪೋಸ್ ನೀಡಿದರು. ಮಾತಿನ ಮಧ್ಯೆ ಅಲಿಯಾ, 'ಸಿದ್ದಾರ್ಥನ ಅಮ್ಮನಿಗೂ ನನ್ನನ್ನು ಕಂಡರೆ ಬಹಳ ಇಷ್ಟ' ಎಂದಿದ್ದು ದೊಡ್ಡ ಸುದ್ದಿಯಾಯಿತು. ಹಾಗೆಂದೇ ಶೀಘ್ರ ಮದುವೆಯ ಸುದ್ದಿ ಹಬ್ಬಿದೆ.

ಆದರೆ ಮದುವೆ ಬಗ್ಗೆ ಅಲಿಯಾ ಸ್ಪಷ್ಟವಾಗಿ ಏನೂ ಹೇಳುತ್ತಿಲ್ಲ. ಒಮ್ಮೆ, 'ಹೌದಲ್ಲ, ಮದುವೆ ತಡ ಮಾಡಬಾರದು' ಎಂದವಳು, ಇನ್ನೊಮ್ಮೆ 'ಮದುವೆ ಸದ್ಯಕ್ಕೆ ಇಲ್ಲಪ್ಪಾ.. ಇನ್ನೂ ಎಷ್ಟೊಂದು ಕೆಲಸ ಮಾಡುವುದಿದೆ' ಎಂದಿದ್ದಾಳೆ. ಸದ್ಯಕ್ಕಂತೂ ಈಕೆ ಬಾಲಿವುಡ್ ನ 'ಹಾಟ್ ಆ್ಯಂಡ್ ಬ್ಯುಸಿ' ನಟಿ. ಕೈಯಲ್ಲಿ ಎರಡು ಚಿತ್ರಗಳಿವೆ. ಇದರ ಮಧ್ಯೆ 'ಆಶಿಖಿ 3' ಚಿತ್ರದಲ್ಲಿ ನಟಿಸುವ ಸುದ್ದಿ ಹಬ್ಬಿದೆ. 24 ಮದುವೆಯ ವಯಸ್ಸಲ್ಲ ಎನ್ನುವುದು ಬಾಲಿವುಡ್ ನಂಬಿಕೆ. ಆದರೆ ಅಲಿಯಾ ಹಾಗೆ ನಂಬಿಲ್ಲವಂತೆ. ಆಕೆಯ ಪ್ರಕಾರ, ಮದುವೆಯಾದ ಬಳಿಕ ಹೀರೋಯಿನ್ ಗಳಿಗೆ ಡಿಮ್ಯಾಂಡ್ ಕಡಿಮೆಯಾಗುತ್ತದೆ ಎನ್ನುವ ನಂಬಿಕೆಯೂ ಸುಳ್ಳಂತೆ! ಅಲಿಯಾ ಮದುವೆ ಶೀಘ್ರ ನಡೆಯಲಿದೆಯೇ ಎನ್ನುವುದನ್ನು ಈಗ ನೀವೇ ನಿರ್ಧರಿಸಿ.

■ ಬಿಂದು